# ಲಿಂಗಾಂಬುದಿಯ ಸನ್ನಿಧಿಯಲ್ಲಿ



ಇತ್ತೀಚೆಗೆ ಕುಟುಂಬದೊಂದಿಗೆ ಮೈಸೂರಿಗೆ ಭೇಟಿ ಮಾಡಿದ್ದೆ. 'ಅಪ್ಪ ಕೆರೆಯ ಹತ್ತಿರ ಹೋಗೋಣ, ಅಲ್ಲಿ ಹಕ್ಕಿಗಳನ್ನು ನೋಡಬಹುದು' ಎಂದ ಮಗಳ ಮಾತಿಗೆ ಸಮ್ಮತಿಸಿ ಸಂಜೆ ಕೆರೆಯ ಪ್ರವೇಶ ದ್ವಾರಕ್ಕೆ ಬಂದಾಗ ಅಚ್ಚರಿ. ಯಾವುದೋ ಅರಣ್ಯ ಪ್ರದೇಶಕ್ಕೆ ಹೋದಂತೆ ಭಾಸವಾಗುತ್ತಿತ್ತು.

ನನ್ನ ಕಾಲೇಜು ದಿನಗಳಲ್ಲಿ, ಈ ಕೆರೆಯ ಪ್ರದೇಶ ಜಾಲೀ ಮರಗಳ ಬೀಡಾಗಿತ್ತು. ಆದರೆ, ಅರಣ್ಯ ಇಲಾಖೆಯ ಮುತುವರ್ಜಿ ಮತ್ತು ಸ್ಥಳೀಯರ ಆಸಕ್ತಿಯಿಂದ ಇದೀಗ ಕಿರು ಅರಣ್ಯವಾಗಿದೆ. ಯಥೇಚ್ಛ ಬಿದುರಿನ ಮರಗಳು ಹಾಗೂ ವಿವಿಧ ಜಾತಿಯ ಅರಣ್ಯ ಸಸ್ಯ ಸಂಕುಲಗಳು ಬೆಳೆದು, ಪ್ರದೇಶವನ್ನು ತಂಪಾಗಿಸಿ ವನಸಿರಿಯ ಸೊಬಗನ್ನು ಹೆಚ್ಚಿಸಿದೆ.

ಈ ವರ್ಷದ ಉತ್ತಮ ಮುಂಗಾರಿನಿಂದ, ಮರಗಿಡಗಳು ಹಸಿರಿನಿಂದ ನಳನಳಿಸುತ್ತಿವೆ. ವಿವಿಧ ಜಾತಿಯ ಪುಷ್ಪಗಳು ಪತಂಗಗಳನ್ನು ಆಕರ್ಷಿಸುತ್ತಿವೆ. ಉತ್ತಮ ಮುಂಗಾರಿನಿಂದಾಗಿ ಕೆರೆಯೂ ಮೈದುಂಬಿದೆ. ಕೆರೆಯ ಮಧ್ಯದಲ್ಲಿ ಇರುವ ನಡುಗಡ್ಡೆಗಳ ಸಸ್ಯ ಸಂಕುಲ ಹಸಿರಿನಿಂದ ಕಂಗೊಳಿಸುತ್ತಾ, ವಿವಿಧ ಜಾತಿಯ ಪಕ್ಷಿಗಳ ವಾಸ ಸ್ಥಳವಾಗಿದೆ.

ಸುಮಾರು 7 ರಿಂದ 8 ಕಿ.ಮೀ ಹಾದಿಯಿರುವ ಈ ಅರಣ್ಯ ಪ್ರದೇಶದಲ್ಲಿ, ನೂರಾರು ಸ್ಥಳೀಯರು ನಿತ್ಯ ವಾಯುವಿಹಾರ ಮಾಡುತ್ತಿರುವುದೂ ಗಮನಕ್ಕೆ ಬಂತು. ಈ ಕೆರೆಗೆ ವಂಶಾಭಿವೃದ್ಧಿಗೆಂದು ವಲಸೆ ಹಕ್ಕಿಗಳು ಬರುತ್ತಿವೆ. ಚಲುಕ (ಬಾತು ಕೋಳಿ), ಸೂಜಿ ಬಾಲದ ಹಕ್ಕಿ, ವಿವಿಧ ಜಾತಿಯ ಕೊಕ್ಕರೆಗಳಲ್ಲದೆ, ಸ್ಥಳೀಯ ಹಕ್ಕಿಗಳಾದ ಮಿಂಚುಳ್ಳಿ, ಗಿಣಿ, ಮಂಗಟ್ಟೆ ಮುಂತಾದವುಗಳೂ ಕಾಣಿಸಿದವು.



ಜಾಲಿಗಿಡಗಳ ಬೀಡಾಗಿದ್ದ ಈ ಕೆರೆಯ ಸುತ್ತಲಿನ ಪ್ರದೇಶ ಈಗ ಹಸಿರಿನಿಂದ ನಳನಳಿಸುತ್ತಿದೆ.

ಚಿತ್ರ– ಲೇಖನ: **ರಾಜು ಎಲ್.ಎಸ್.**